ಸೆಲೆಬ್ರಿಟಿ

■ ಹನಿ

## ಮರ್ಡೋಕ್ ಮುಂದಿರುವ ಪ್ರಶ್ನೆ



'ಜಾಗತಿಕ ಮೀಡಿಯಾ ಮೊಘಲ್' ಎಂದೇ ಕರೆಯಲ್ಪಡುವ ಕೀತ್ ರೂಪರ್ಟ್ ಮರ್ಡೋಕ್ ಸದ್ಯ ಸಂಕಟದಲ್ಲಿದ್ದಾರೆ. ಮಾಧ್ಯಮ ಲೋಕದಲ್ಲಿ ಮರ್ಡೋಕ್‌ಗೆ ದೊಡ್ಡ ಹೆಸರಿದೆ. ತನ್ನ ಒಡೆತನದ ಹಲವು ಪತ್ರಿಕೆಗಳು, ಟಿವಿ ಚಾನೆಲ್, ವೆಬ್ ಸೈಟ್‌ಗಳ ಮೂಲಕ ಹಲವು ಸರಕಾರಿ ಸತ್ಯಗಳನ್ನು ನಿಷ್ಠುರವಾಗಿ ಬಯಲಿಗೆಳೆದಿರುವ ಮರ್ಡೋಕ್, ಈಗ ತಮ್ಮ ಬಹುತೇಕ ಸುದ್ದಿಕಥೆಗಳ ಹಿಂದೆ 'ಟೆಲಿಫೋನ್ ಕದ್ದಾಲಿಕೆ' ಎಂಬ ಅಪಮೌಲ್ಯ ಇರುವ ಸತ್ಯವನ್ನು ಕಂಡುಕೊಂಡಿದ್ದಾರೆ. ನ್ಯೂಸ್ ಕಾರ್ಪೊರೇಶನ್ ಎಂಬ ದೈತ್ಯ ಮಾಧ್ಯಮ ಸಂಸ್ಥೆಯ ಚೇರ್‌ಮನ್ ಮತ್ತು ಸಿಇಒ ಆಗಿರುವ ಮರ್ಡೋಕ್, ತಮ್ಮ 80ರ ಇಳಿವಯಸ್ಸಿನಲ್ಲಿ 'ಮೌಲ್ಯಪರೀಕ್ಷೆ'ಯ ನಿಕಷಕ್ಕೆ ಒಡ್ಡಿಕೊಂಡಿದ್ದಾರೆ.

ಮರ್ಡೋಕ್ ಒಡೆತನದ, 'ದಿ ನ್ಯೂಸ್ ಆಫ್ ವರ್ಲ್ಡ್' ಎಂಬ 40 ಲಕ್ಷ ಓದುಗರಿದ್ದ ಅತ್ಯಂತ ಜನಪ್ರಿಯ ಪತ್ರಿಕೆಯನ್ನು ಕಳೆದ ವಾರ ಬಂದ್ ಮಾಡಲಾಗಿದೆ. 168 ವರ್ಷಗಳ ಇತಿಹಾಸವಿದ್ದ ಈ ಸಂಡೇ ಪತ್ರಿಕೆ ಬ್ರಿಟನ್ನಿನ ರಾಜಮನೆತನ ಸಹಿತ ಹಲವು ಗಣ್ಯರ ಟೆಲಿಫೋನ್‌ಗಳನ್ನು ಕದ್ದಾಲಿಸುತ್ತಿದ್ದುದು ಬೆಳಕಿಗೆ ಬಂದು ಮರ್ಡೋಕ್ ಮುಜುಗರ ಅನುಭವಿಸಿದರು. ಪತ್ರಿಕೆ ಮುಚ್ಚುವುದೊಂದೇ ದಾರಿ ಎನ್ನುವುದೂ ಅವರಿಗೆ ಖಚಿತವಾಯಿತು. ಆದರೆ ಈಗ ತಮ್ಮ ಒಡೆತನದ ಇನ್ನೂ ಹಲವು ಪತ್ರಿಕೆಗಳನ್ನು ಮುಚ್ಚಬೇಕೆ ಎಂಬ ಪ್ರಶ್ನೆ ಅವರ ಎದುರಿಗಿದೆ. ನಿಜಕ್ಕೂ ಇದು ಸಂಕಟದ ಸಮಯವೇ.

ಆಸ್ಟ್ರೇಲಿಯಾದಲ್ಲಿ ಹುಟ್ಟಿ, ಇಂಗ್ಲೆಂಡಿನಲ್ಲಿ ಕಲಿತು, ಅಮೆರಿಕದ ಪೌರತ್ವ ಪಡೆದಿರುವ ರೂಪರ್ಟ್ ಮರ್ಡೋಕ್, 50ರ ದಶಕದಲ್ಲಿ ಮೊದಲ ಬಾರಿಗೆ ಆಸ್ಟ್ರೇಲಿಯಾದಲ್ಲಿ ಟಿವಿ ಚಾನೆಲ್ ಆರಂಭಿಸಿದ್ದರು. ಆದರೆ ಕೆಲವೇ ಸಮಯದಲ್ಲಿ ಅದನ್ನು ಮಾರಾಟ ಮಾಡಿದರು. 1986ರಲ್ಲಿ ಅಮೆರಿಕದಲ್ಲಿ ಈತ ಆರಂಭಿಸಿದ ಫಾಕ್ಸ್ ಬ್ರಾಡ್‌ಕಾಸ್ಟಿಂಗ್ ಕಂಪೆನಿ ಜನಪ್ರಿಯಗೊಂಡಿತು. ಒಂದೂವರೆ ದಶಕದ ಬಳಿಕ ಉಪಗ್ರಹ ಹಕ್ಕುಗಳ ಖರೀದಿ, ಸಿನಿಮಾ, ಅಂತರ್ಜಾಲದಲ್ಲಿ ಹೂಡಿಕೆ– ಹೀಗೆ ಮರ್ಡೋಕ್ ಸಾಮ್ರಾಜ್ಯ ವಿಸ್ತರಿಸಿತು. ಅತ್ಯಂತ ಗೌರವಾನ್ವಿತ ಪತ್ರಿಕೆ ಎನ್ನಿಸಿರುವ ದಿ ವಾಲ್‌ಸ್ಟ್ರೀಟ್ ಜರ್ನಲ್ ಕೂಡಾ ಮರ್ಡೋಕ್ ಕೈವಶವಾಯಿತು. ಟೈಮ್ ಪತ್ರಿಕೆಯ 'ಜಗತ್ತಿನ ನೂರು ಮಂದಿ ಅತ್ಯಂತ ಪ್ರಭಾವಶಾಲಿ ವ್ಯಕ್ತಿ'ಗಳ ಪಟ್ಟಿಯಲ್ಲಿ ಮರ್ಡೋಕ್ 3 ಸಲ ಸ್ಥಾನ ಪಡೆದಿದ್ದಾರೆ. 2010ರಲ್ಲಿ ಫೋರ್ಬ್ಸ್ ಪತ್ರಿಕೆ ಪ್ರಕಟಿಸಿದ ಪಟ್ಟಿಯ ಪ್ರಕಾರ ಈತ ಜಗತ್ತಿನ 13ನೆಯ ಅತ್ಯಂತ ಪ್ರಭಾವಶಾಲಿ ವ್ಯಕ್ತಿ. 6.3 ಶತಕೋಟಿ ಡಾಲರ್ ಆಸ್ತಿ ಹೊಂದಿರುವ ಜಗತ್ತಿನ 117ನೆ ಅತಿದೊಡ್ಡ ಶ್ರೀಮಂತ.

ಮೆಲ್ಬೋರ್ನ್‌ನಲ್ಲಿ ನ್ಯೂಸ್ ಲಿಮಿಟೆಡ್ ಕಂಪೆನಿಯನ್ನು ಲಾಭದಾಯಕವಾಗಿ ನಡೆಸುತ್ತಿದ್ದ ಅಪ್ಪನ ಒಬ್ಬನೇ ಮಗ ರೂಪರ್ಟ್. ಆಕ್ಸ್‌ಫರ್ಡ್ ವಿ.ವಿ ಯಲ್ಲಿ ಓದುತ್ತಿದ್ದಾಗಲೇ ತಂದೆ ತೀರಿಕೊಂಡರು. ಆಗ ರೂಪರ್ಟ್‌ಗೆ 22ರ ಹರೆಯ. ಓದು ಬಿಟ್ಟು ಮೆಲ್ಬೋರ್ನ್‌ಗೆ ಬಂದು ತಂದೆಯ ಉದ್ಯಮದ ಜವಾಬ್ದಾರಿ ಹೊತ್ತ ಬಳಿಕ ಈತ ಸವೆಸಿದ ದಾರಿ ಅಗಾಧವಾದದ್ದು. 1953ರಲ್ಲಿ ನ್ಯೂಸ್ ಲಿಮಿಟೆಡ್‌ಗೆ ಎಂಡಿ ಆದ ರೂಪರ್ಟ್, 93ರಲ್ಲಿ ಹಾಂಕಾಂಗ್‌ನ ಪ್ರತಿಷ್ಠಿತ ಸ್ಟಾರ್ ನ್ಯೂಸ್ ಕಂಪೆನಿಯನ್ನೇ ಖರೀದಿಸುವಷ್ಟು ಬಲಶಾಲಿಯಾದ. ಮೊದಲ ಇಬ್ಬರೂ ಹೆಂಡತಿಯರಿಗೆ ಡೈವೋರ್ಸ್ ನೀಡಿರುವ ಈ ತಾತ ತನ್ನ 68ರ ಹರೆಯದಲ್ಲಿ ಚೀನಾದ ಡೆಂಗ್ ವೆಂಡಿಯನ್ನು ಮದುವೆಯಾದದ್ದೂ ಒಂದು ದೊಡ್ಡ ಕಥೆ; ಆಗ ಆಕೆಯ ಪ್ರಾಯ 30 ಅಷ್ಟೆ! ಮೂವರು ಹೆಂಡತಿಯರ ಮೂಲಕ ಏಳು ಮಕ್ಕಳನ್ನು ಹೊಂದಿರುವ ಮರ್ಡೋಕ್ ಇಳಿವಯಸ್ಸಿನಲ್ಲಿ ಮೌಲ್ಯ ಪರೀಕ್ಷೆಗೆ ಕುಳಿತಿರುವುದು ನಿಜಕ್ಕೂ ಮಾಧ್ಯಮರಂಗಕ್ಕೆ ಒಂದು ಪಾಠ. 'ಸುದ್ದಿಯನ್ನು ಪಡೆಯಲು ಮಾಧ್ಯಮಗಳು ಯಾವ ದಾರಿಯನ್ನು ಬೇಕಾದರೂ ಹಿಡಿಯಬಹುದೆ?' ಎನ್ನುವ ನೈತಿಕ ಪ್ರಶ್ನೆ ಮರ್ಡೋಕ್ ಎದುರಿಗಿದೆ. 'ಸರಕಾರದ ಕೈಗೆ ಸಿಕ್ಕಿ ಬಿದ್ದ ಬಳಿಕವಷ್ಟೇ ಈ ಪ್ರಶ್ನೆ ಎದುರಾಗಿದೆಯೆ..' ಎನ್ನುವುದು ಓದುಗರು ಕೇಳಬೇಕಾದ ಪ್ರಶ್ನೆ.

## ಬದಲಾದ ಧೋನಿ?



ವೆಸ್ಟ್ ಇಂಡೀಸ್ ವಿರುದ್ಧ ಕೊನೆಯ ಟೆಸ್ಟ್‌ನಲ್ಲಿ ಭಾರತ ತಂಡ ಪಂದ್ಯವನ್ನು ಡ್ರಾ ಮಾಡಿಕೊಂಡದ್ದು ಎಷ್ಟು ಸರಿ? ಎನ್ನುವ ಚರ್ಚೆ ಜೋರಾಗಿ ನಡೆದಿದೆ. 'ಕೊನೆಯ ಟೆಸ್ಟ್ ಗೆಲ್ಲಲು ಪ್ರಯತ್ನಿಸಿದ್ದರೆ ಪಂದ್ಯ ಸೋತು ಸರಣಿ ಸಮಬಲ ಆಗುತ್ತಿತ್ತು. ಸರಣಿಯ ಗೆಲುವು ಉಳಿಸಿಕೊಳ್ಳಲು ಟೆಸ್ಟ್ ವಿಜಯ ಕೈಬಿಡಬೇಕಾಯಿತು. ನಾವು ಮಾಡಿದ್ದು ಸರಿ' ಎಂದು ನಾಯಕ ಮಹೇಂದ್ರ ಸಿಂಗ್ ಧೋನಿ ಉತ್ತರಿಸಿದ್ದಾರೆ.

47 ಓವರ್‌ಗಳಲ್ಲಿ 180 ರನ್ ಗಳಿಸುವ ಗುರಿ ಬಹಳ ದೊಡ್ಡದೆ? ಟೆಸ್ಟ್ ಕ್ರಿಕೆಟ್ ನಲ್ಲಿ ಮೊದಲ ರ್‍ಯಾಂಕಿಂಗ್ ಹೊಂದಿರುವ, ಟ್ವೆಂಟಿ–20 ಕ್ರಿಕೆಟ್‌ನಲ್ಲೂ ಚಾಂಪಿಯನ್ ಆಗಿರುವ ತಂಡಕ್ಕೆ ಇದೊಂದು ದೊಡ್ಡ ಸವಾಲೆ? ಅದರಲ್ಲೂ ಉತ್ತಮ ಆರಂಭದ ಬಳಿಕ ಕೊನೆಯ 90 ಎಸೆತಗಳಲ್ಲಿ 86 ರನ್ ಗಳಿಸುವುದಷ್ಟೆ ಗುರಿ ಇದ್ದಾಗ ಅದನ್ನೂ ಸಾಧಿಸದಿದ್ದರೆ ಹೇಗೆ?– ಹೀಗೆ ಸಾಲು ಸಾಲು ಪ್ರಶ್ನೆಗಳು ಹುಟ್ಟಿಕೊಂಡಿವೆ. 'ಕ್ರಿಕೆಟ್ ನಲ್ಲಿ ಹೋರಾಟಕ್ಕಿಂತ ಗೆಲುವೇ ಮುಖ್ಯ' ಎಂಬ ಸೂತ್ರಕ್ಕೆ ಧೋನಿ ಕಟ್ಟುಬಿದ್ದಿದ್ದು ಖಚಿತವಾಗಿದೆ. ಈ ಹಿಂದಿನ ಆಕ್ರಮಣಕಾರಿ ನಾಯಕತ್ವ ನೀತಿಯನ್ನು ಧೋನಿ ಈಗ ಕೈಬಿಟ್ಟಿದ್ದಾರೆಯೆ..? ಸರಣಿ ಗೆಲುವಿನ ಮೂಲಕ ನಾಯಕತ್ವ ಉಳಿಸಿಕೊಳ್ಳುವತ್ತಲೇ ಅವರ ಗಮನ ಹರಿದಿದೆಯೆ..?

ಧೋನಿ ನಿರ್ಧಾರಕ್ಕೆ ಇನ್ನೂ ಒಂದು ಕಾರಣವಿದೆ. ವೆಸ್ಟ್ ಇಂಡೀಸ್ ಪ್ರವಾಸದಲ್ಲಿ ಭಾರತ ಬಾಲಂಗೋಚಿ ಆಟಗಾರರ ಪ್ರದರ್ಶನ ಅಷ್ಟೇನೂ ಉತ್ತಮವಾಗಿರಲಿಲ್ಲ. ಸ್ವತಃ ಧೋನಿ ಮತ್ತು ಸುರೇಶ್ ರೈನಾರ ಫಾರ್ಮ್ ಕೂಡಾ ಕೆಳಮುಖದಲ್ಲಿದೆ. ಹಾಗಾಗಿ ಸವಾಲು ಕೈಗೆತ್ತಿಕೊಳ್ಳಲು ಹಿಂಜರಿದಿದ್ದಾರೆ. ಸದ್ಯಕ್ಕೆ ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ಭಾರತ ಮೊದಲ ಸ್ಥಾನ ಉಳಿಸಿಕೊಂಡಿದ್ದರೂ, ಈಗ ಆರಂಭವಾಗಿರುವ ಇಂಗ್ಲೆಂಡ್ ಪ್ರವಾಸದಲ್ಲಿ 1–3ರ ಸೋಲು ಅನುಭವಿಸಿದರೆ ರ್‍ಯಾಂಕಿಂಗ್ ಕುಸಿತ ಖಂಡಿತಾ. ಹಾಗಾದಲ್ಲಿ ಆಗ ಧೋನಿಯೇ ಅದಕ್ಕೆ ಹೊಣೆ ಹೊರಬೇಕಾಗಬಹುದು. ಈ ಮಧ್ಯೆ ಆಸ್ಟ್ರೇಲಿಯನ್ ಅಂಪೈರ್ ಡೆರಿಲ್ ಹಾರ್ಪರ್ ವಿರುದ್ಧ ಧೋನಿ ಮಾಡಿದ್ದಾರೆನ್ನಲಾದ ಟೀಕೆಯೂ ವಿವಾದವಾಗಿ ಬೆಳೆಯುತ್ತಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65